## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಹೈದ್ರಾಬಾದ್- ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೊಪ್ಪಳ ಜಿಲ್ಲಾ ಪಂಚಾಯತ್‌ಗೆ ಬಿಡುಗಡೆಯಾದ ಅನುದಾನವನ್ನು ಅಲ್ಲಿನ ಅನುಷ್ಠಾನಾಧಿಕಾರಿಗಳು ಸಮರ್ಪಕವಾಗಿ ಬಳಸಿಕೊಳ್ಳದೇ ದುರುಪಯೋಗಕ್ಕೆ ಕಾರಣರಾಗಿರುತ್ತಾರೆ ಎಂಬ ಆರೋಪಗಳಿಗೆ ಸಂಬಂಧಿಸಿದಂತೆ ಸಂಬಧಿಸಿದ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆ, ವಿಚಾರಣಾಧಿಕಾರಿಯವರನ್ನು ನೇಮಿಸುವ ಬಗ್ಗೆ ಆದೇಶ.

**ಓದಲಾಗಿದೆ:**

1. ಕಾರ್ಯದರ್ಶಿ, ಹೈದ್ರಾಬಾದ್- ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ ಇವರ ಪತ್ರ ಸಂಖ್ಯೆ:ಹೈ.ಕ.ಪ್ರ.ಅ.ಮಂ-ಕ/ತಾಶಾ/ಸಿಆರ್-1/2014-15/1002. ದಿ:29.12.14.
2. ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ:ಗ್ರಾಅಪ 05 ಇಎನ್‌ಕ್ಯೂ 2015, ದಿನಾಂಕ:02.5.2015
3. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 5ಇಎನ್‌ಕ್ಯೂ 2015, ದಿನಾಂಕ:18.9.2016
4. ಅಪಾಧಿತರ ವಿವರಣೆ ದಿನಾಂಕ:
   1. ಪಿ.ಗೋಪಾಲ್ ಸ.ಕಾ.ಇಂ- ದಿ:03.8.15,
   2. ಬಿ.ಸೆಲ್ವಕುಮಾರ್, ಸ.ಇಂ, ದಿ:25.5.205
   3. ಪಿ.ವಿಶ್ವನಾಥ, ಸ.ಇಂ ದಿ:18.6.2015.
   4. ಮಹಮದ್ ಖಜಾ. ಜಿ. ಸ.ಇಂ ದಿ:6.6.2015.
   5. ಎಂ.ತಿಮ್ಮಣ್ಣ, ಸ.ಕಾ.ಇಂ-22.8.2015.

**ಪ್ರಸ್ತಾವನೆ:-**

ಕಾರ್ಯದರ್ಶಿ. ಹೈದ್ರಾಬಾದ್- ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ, ಇವರು ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ:29.12.2014 ರ ಪತ್ರದಲ್ಲಿ ಹೈದ್ರಾಬಾದ್- ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೊಪ್ಪಳ ಜಿಲ್ಲಾ ಪಂಚಾಯುತ್‌ಗೆ ಬಿಡುಗಡೆಯಾದ ಅನುದಾನವನ್ನು ಅಲ್ಲಿನ ಅನುಷ್ಟನಾಧಿಕಾರಿಗಳು ಸಮರ್ಪಕವಾಗಿ ಬಳಸಿಕೊಳ್ಳದೆ . ಹಣ ದುರುಪಯೋಗಕ್ಕೆ ಕಾರಣರಾಗಿರುತ್ತಾರೆ ಎಂಬ ಆರೋಪಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು:-

1. ಶ್ರೀ ಎಂ.ಎನ್.ಚಂದ್ರಶೇಖರ್, ಹಿಂದಿನ ಕಾ.ಇಂ, ಪಂ.ರಾ.ಇಂ ವಿಭಾಗ, ಕೊಪ್ಪಳ.
2. ಶ್ರೀ ಗಾಳೆಪ್ಪ ನಕ್ಕುಂದಿ, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕೊಪ್ಪಳ
3. ಹೆಚ್. ಲಕ್ಷ್ಮರಿನಾಯಕ್, ಅಂದಿನ ಕಾ.ಇಂ, ಪಂ.ರಾ.ಇಂ ವಿಭಾಗ, ಕೊಪ್ಪಳ.
4. ಹೆಚ್.ಯಮನೂರಪ್ಪ ಅಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕೊಪ್ಪಳ .
5. ಶ್ರೀ ಪಿ.ಗೋಪಾಲ್, ಅಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಗಂಗಾವತಿ.
6. ಶ್ರೀ ಎಂ.ತಿಮ್ಮಣ್ಣ, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕೊಪ್ಪಳ.
7. ಶ್ರೀ ಖಾಜಾಜಿ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಕೊಪ್ಪಳ.
8. ವಿಶ್ವನಾಥ, ಹಿಂದಿನ ಕಿ,ಇಂ, ಪಂ.ರಾ.ಇಂ ಉಪವಿಭಾಗ, ಕೊಪ್ಪಳ.
9. ಶ್ರೀ ಸೆಲ್ವಕುಮಾರ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಕೊಪ್ಪಳ.
10. ಶ್ರೀ ರಾಘವೇಂದ್ರ, ಕಿ.ಇಂ, ಪಂ.ರಾ.ಇಂ ಉಪವಿಭಾಗ, ಗಂಗಾವತಿ.

ಸರ್ಕಾರವು ಕಾರ್ಯದರ್ಶಿ, ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲೆ ತಿಳಿಸಿರುವ 10 ಮಂದಿ ಆರೋಪಿತರ ಪೈಕಿ ಕ್ರಮ ಸಂಖ್ಯೆ (3) ರಿಂದ (10) ರವರಗಿನ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ಇಲಾಖೆ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರಡಿ ಜರುಗಿಸಲು ತೀರ್ಮಾನಿಸಿ, ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ:2.5.2015 ರಂದು ಕಾರಣ ಕೇಳುವ ನೋಟಿಸ್‌ನೊಂದಿಗೆ ಆರೋಪ ಪಟ್ಟಿಯನ್ನು ಜಾರಿ ಮಾಡಲಾಗಿರುತ್ತದೆ.

ಉಳಿದ ಶ್ರೀ ಎಂ.ಎಸ್.ಚಂದ್ರಶೇಖರ್, ಹಿಂದಿನ ಕಾರ್ಯಪಾಲಕ ಇಂಜಿನಿಯರ್ ಮತ್ತು ರಲ್ಲಿನ ಶ್ರೀ ಗಾಳೇಪ್ಪ ನಕ್ಕುಂದಿ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಮರಣ ಹೊಂದಿದ್ದರಿಂದ ಅವರಿಂದ ಉಂಟಾಗಿದ್ದ ಆರ್ಥಿಕ ನಷ್ಟವನ್ನು ಸದರಿ ಅಧಿಕಾರಿಗಳ ಕಾನೂನು ಬದ್ಧ ವಾರಸುದಾರರನ್ನು ಗುರುತಿಸಿ, ಅವರ ವಿರುದ್ಧ ಲಿಟಿಗೇಷನ್ ರೂಲ್ಸ್-1985 ರಡಿ ಸಿವಿಲ್ ದಾವೆ ಹೂಡಿ ಸರ್ಕಾರಕ್ಕೆ ಬರಬೇಕಾಗಿರುವ ಹಣವನ್ನು ಉತ್ತರಾಧಿಕಾರಿವಾಗಿ ಪಡೆದ ಆಸ್ತಿಗಳಿಂದ ವಸೂಲಿ ಮಾಡಲು ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ: 18.9.2015 ರ ಪತ್ರದಲ್ಲಿ ಕಾರ್ಯದರ್ಶಿ, ಹೈದ್ರಾಬಾದ್- ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇವರನ್ನು ಕೋರಲಾಗಿದೆ.

ಮೇಲೆ ಓದಲಾದ ಕ್ರಮಾಂಕ (4) ರಲ್ಲಿ ತಿಳಿಸಿರುವ ಐದು ಮಂದಿ ಆರೋಪಿತರು ವಿವರಣೆ ಸಲ್ಲಿಸಿ, ಅವರುಗಳ ವಿರುದ್ಧದ ಆರೋಪಗಳನ್ನು ನಿರಾಕರಿಸಿರುತ್ತಾರೆ. ಉಳಿದ ಮೂವರು ಯಾವುದೇ ವಿವರಣೆಯನ್ನು ಸಲ್ಲಿಸಿರುವುದಿಲ್ಲ. ವಿವರಣೆ ಸಲ್ಲಿಸಿರುವ ಆರೋಪಿತರು ಆರೋಪಗಳನ್ನು ನಿರಾಕರಿಸಿರುವುದರಿಂದ ಹಾಗೂ ಮೂವರ ಆರೋಪಿತರು ಯಾವುದೇ ವಿವರಣೆಯನ್ನು ಸಲ್ಲಿಸದೇ ಇರುವುದರಿಂದ ಆರೋಪಗಳ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ಪ್ರಕರಣದಲ್ಲಿ ವಿವರವಾದ ಇಲಾಖೆ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರ ಅನುಸಾರ ನಡೆಸುವುದು ಅಗತ್ಯವೆಂದು ಸರ್ಕಾರವು ನಿರ್ಧರಿಸಿದೆ. ಆದ್ದರಿಂದ. ಈ ಆದೇಶ.

**ಆದೇಶ ಸಂಖ್ಯೆ: ಗ್ರಾಅಪ 05 ಇಎನ್‌ಕ್ಯೂ 2015, ಬೆಂಗಳೂರು, ದಿನಾಂಕ:08.3.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಜಂಟಿ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11 ಮತ್ತು 13 ರ ಅನುಸಾರ ನಡೆಸಲು ನಿಯಮ 11 (2) ರಡಿ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎ.ಎಂ.ಪತ್ತಾರ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ನಿಯಮ 11 (5)(ಸಿ) ರನ್ವಯ ತಾಂತ್ರಿಕ ಸಹಾಯಕರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಧಾರವಾಡ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ.

1. ಹೆಚ್. ಲಷ್ಕರಿನಾಯಕ್, ಅಂದಿನ ಕಾ.ಇಂ, ಪಂ.ರಾ.ಇಂ ವಿಭಾಗ, ಕೊಪ್ಪಳ.
2. ಹೆಚ್.ಯಮನೂರಪ್ಪ ಅಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕೊಪ್ಪಳ .
3. ಶ್ರೀ ಪಿ.ಗೋಪಾಲ್, ಅಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಗಂಗಾವತಿ.
4. ಶ್ರೀ ಎಂ.ತಿಮ್ಮಣ್ಣ, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕೊಪ್ಪಳ.
5. ಶ್ರೀ ಖಾಜಾಜಿ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಕೊಪ್ಪಳ.
6. ವಿಶ್ವನಾಥ, ಹಿಂದಿನ ಕಿ,ಇಂ, ಪಂ.ರಾ.ಇಂ ಉಪವಿಭಾಗ, ಕೊಪ್ಪಳ.
7. ಶ್ರೀ ಸೆಲ್ವಕುಮಾರ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಕೊಪ್ಪಳ.
8. ಶ್ರೀ ರಾಘವೇಂದ್ರ, ಕಿ.ಇಂ, ಪಂ.ರಾ.ಇಂ ಉಪವಿಭಾಗ, ಗಂಗಾವತಿ.

ಇಲಾಖೆ ವಿಚಾರಣೆಗೆ ಅಗತ್ಯವಿರುವ ಸ್ಥಳಾವಕಾಶ, ಲೇಖನ ಸಾಮಗ್ರಿ ಹಾಗೂ ಸಿಬ್ಬಂದಿಯನ್ನು ಒದಗಿಸಲು ಅಧೀಕ್ಷಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಧಾರವಾಡ ಇವರಿಗೆ ಸೂಚಿಸಿದೆ.

ವಿಚಾರಣಾಧಿಕಾರಿಗಳು ಈ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11 ರಲ್ಲಿ ನಿಗಧಿಪಡಿಸಿರುವ ಕಾರ್ಯವಿಧಾನದ ಪ್ರಕಾರ ನಡೆಸಿ, 3 ತಿಂಗಳೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸುವುದು. ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ನಿಯಮಾನುಸಾರ ನಿಗಧಿತ ಸಂಭಾವನೆ ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

08/03/2015

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಇವರಿಗೆ:</u>

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ/ಜಲ ಸಂಪನ್ಮೂಲ ಇಲಾಖೆ/ ಸಣ್ಣ ನೀರಾವರಿ ಇಲಾಖೆ,
3. ಆಯುಕ್ತರು, ಗ್ರಾಮೀಣಾ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ.
6. ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಧಾರವಾಡ,
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
9. ಶ್ರೀ ಎ.ಎಂ.ಪತ್ತಾರ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮನೆ.ನಂ.144, 2 ನೇ ಕ್ರಾಸ್, ಲಕ್ಷ್ಮೀನಗರ ಹತ್ತಿರ, ಹುಬ್ಬಳ್ಳಿ-580030 (ಮೊಬೈಲ್ ಸಂಖ್ಯೆ:9986153878).
10. ತಾಂತ್ರಿಕ ಸಹಾಯಕ. ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಧಾರವಾಡ .
11. ಸಂಬಂಧಿಸಿದ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರ ಮುಖಾಂತರ)
12. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
13. ಗ್ರಾ.ಅ.ಪಂ.ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) /ಜಂಟಿ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು .
14. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.